**ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.**

**ಸಿ. ಸಿ. ನಂಃ 518/2019**

ಪಿ.ಡಬ್ಲ್ಯೂ- **6**
ಸಿ.ಡಬ್ಲೂ- **9**

ಹೆಸರು ಃ- ಮಲ್ಲಿಕಾರ್ಜುನ ಮೆಣಸಗಿ

ತಂದೆ / ಗಂಡನ ಹೆಸರು ಃ- ನಾಗನಗೌಡ

ವಯಾ ಃ- 45 ವರ್ಷ

ಉದ್ಯೋಗ ಃ- ಕೂಲಿಕೆಲಸ

ವಾಸಸ್ಥಳ ಃ- ಗದಗ

ಸತ್ಯ ಪ್ರತಿಜ್ಞೆ ಮೇರೆಗೆ ಃ- ದಿನಾಂಕಃ 15-09-2025

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

1) ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತನ ಪರಿಚಯವಿಲ್ಲ. ಚಾಸಾ-1 ಮತ್ತು ಚಾಸಾ-10 ರವರ ಪರಿಚಯವಿಲ್ಲ.

2) ಸುಮಾರು 6 ವರ್ಷಗಳ ಹಿಂದೆ ಅಣ್ಣಿಗೇರಿ ಬಸ್ಸ ನಿಲ್ದಾಣದಲ್ಲಿ ನನ್ನ ಅಕ್ಕ ಅಪಘಾತದಲ್ಲಿ ಮರಣ ಹೊಂದಿರುತ್ತಾಳೆ ಅವಳನ್ನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಫಕ್ಕೀರಗೌಡ ರವರು ದೂರವಾಣಿ ಕರೆ ಮಾಡಿರುತ್ತಾರೆ. ನಂತರ ನಾನು ರೋಣದಿಂದ ಹುಬ್ಬಳ್ಳಿಗೆ ಹೋಗಿರುತ್ತೇನೆ.

3) ಅಲ್ಲಿ ನನ್ನ ಸಹೋದರಿಯಾದ ಶಾಂತವ್ವ ಸುರೇಶ ಬಣ್ಣಿಗೋಳ ರವರು ಮರಣ ಹೊಂದಿದ್ದು ಕಂಡಿರುತ್ತೇನೆ. ಪೊಲೀಸರು ಆಸ್ಪತ್ರೆಗೆ ಬಂದಿದ್ದು ಅಲ್ಲಿ ನಾನು ಹೇಳಿಕೆ ನೀಡಿದ್ದು ಅವರು ಪ್ರಕರಣ ದಾಖಲು ಮಾಡಲು ತಿಳಿಸಿರುತ್ತಾರೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)*

**ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -**

1) ದಿನಾಂಕ 09-04-2019 ರಂದು ಸುಮಾರು ಬೆಳಗ್ಗೆ 10-45 ಗಂಟೆಗೆ ಕೆ.ಎಸ್.ಆರ್.ಟಿ.ಸಿ. ಬಸ್ಸ ನಿಲ್ದಾಣದಲ್ಲಿ ಅಪಘಾತವಾದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನನ್ನ ಸಹೋದರಿಗೆ ನೋಡಲಾಗಿ ಅವರ ಬಲಕಾಲಿಗೆ ಬಾರಿ ಪ್ರಮಾಣದ ಪೆಟ್ಟಾಗಿದ್ದು ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಅದೇ ರೀತಿ ಚಿಕಿತ್ಸೆ ಫಲಿಸದೇ ಘಟನೆಯ ದಿನದಂದು ಸಂಜೆ 06-10 ಗಂಟೆಗೆ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನಾನು ನೇರವಾಗಿ ಕೀಮ್ಸ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

2) ಚಾಸಾ-8 ನನ್ನ ಮಾವನಾಗಬೇಕು. ನಾನು ಚಾಸಾ-8 ರವರಿಂದ ಅಪಘಾತದ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಸಹೋದರಿಯ ಅಪಘಾತವು ಆರೋಪಿತನು ಚಲಾಯಿಸಿಕೊಂಡು ಬಂದ ಬಸ್ಸ ಸಂಖ್ಯೆ ಕೆಎ 23 ಎಫ್ 764 ನ್ನು ನವಲಗುಂದ ಕಡೆಗೆ ಹೋಗಲು ನಿಲ್ಲಿಸಿದ್ದು ನಂತರ ಸ್ವಲ್ಪ ಸಮಯದ ನಂತರ ನವಲಗುಂದ ಕಡೆಗೆ ಹೋಗಲು ಬಸ್ಸನ್ನು ಏಕಾಏಕಿ ಹಿಂದೆ ನೋಡದೆ ನಿಷ್ಕಾಲಜಿತನದಿಂದ ಆರೋಪಿತನು ಹಿಂದಕ್ಕೆ ತೆಗೆದುಕೊಂಡು ಬಸ್ಸಿನ ಹಿಂದೆ ಅಕ್ಕಿ ಕಾಳುಗಳನ್ನು ಆರಿಸುತ್ತಿದ್ದ ಶಾಂತವ್ವ ಸುರೇಶ ಬನ್ನಿಗೋಳ ಇವರಿಗೆ ಗುದ್ದಿ, ಬಲಗಾಲಿನ ಮೇಲೆ ಬಸ್ಸಿನ ಹಿಂದಿನ ಚಕ್ರವನ್ನು ಹಾಯಿಸಿ ಬಾರಿ ಪ್ರಮಾಣದ ಗಾಯವನ್ನು ಮಾಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ.

*ಪಾಟೀಸವಾಲು ಆರೋಪಿ ಪರ ಶ್ರೀ ಎಸ್ ಎಸ್ ಎ ವಕೀಲರಿಂದ ಃ-*

1) ನಾನು ಅಪಘಾತವನ್ನು ಪ್ರತ್ಯಕ್ಷ ಕಂಡಿಲ್ಲ ಎಂದರೆ ಸರಿ. ಚಾಸಾ-4 ರವರು ಸಹ ಪ್ರತ್ಯಕ್ಷ ಕಂಡಿಲ್ಲ. ದೂರವಾಣಿ ಸಂಖ್ಯೆ ಗೊತ್ತಿಲ್ಲ. ದೂರವಾಣಿ ಸಂಖ್ಯೆಯನ್ನು ಹೇಳಿಕೆಯಲ್ಲಿ ಬರೆಸಿಲ್ಲ. ಹೇಳಿಕೆಯಲ್ಲಿ ತಂಗಿ ಎಂದು ನಮೂದು ಇರುತ್ತದೆ ಅಂದರೆ ಸರಿಯಲ್ಲ. ಅವರು ನನ್ನ ಅಕ್ಕಳಾಗಬೇಕು. ಮೃತರ ಕುಟುಂಬದವರು ಎಂವಿಸಿ ಸಂಖ್ಯೆ 237/2020 ನ್ನು 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗಂಗಾವತಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣಕ್ಕೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

**(ನವೀನ ಎಫ್. ಡಿಸೋಜಾ)**
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**